# “ಜೀವನಾಮೃತ ಜಲನಿಧಿ”

ಸಿ. ಎನ್ ಅಶೋಕ್

ರಾಷ್ಟ್ರಪರಿಸರ ಪ್ರಶಸ್ತಿ ಪುರಸ್ಕೃತರು.

ಚನ್ನರಾಯಪಟ್ಟಣ.

“ವಸುದೇವ ಕುಟುಂಬಕಂ”ಇಡೀ ಭೂಮಂಡಲವೇ ಒಂದು ಮನೆ 84 ಲಕ್ಷ ಜೀವರಾಶಿಗಳಿಗೆ ಆಶ್ರಯವನ್ನು ನೀಡಿದೆ. ಪರಿಸರ ಪಂಚಭೂತಗಳಿಂದ ಆವೃತ್ತವಾಗಿದ್ದು ಯಾವುದೇ ಒಂದು ಇಲ್ಲವಾದರೂ ಇಡೀ ಜೀವವೈವಿದ್ಯವೇ ಅವನತಿಯನ್ನು ಹೊಂದುತ್ತದೆ.

ಪಂಚಭೂತಗಳಲ್ಲಿ ಜೀವಾಮೃತ ಜಲಬಿಂದುವೂ ಒಂದು. ಒಂದೊಂದುಹನಿಯು ಕಣಕಣದಲ್ಲೂ ಜೀವ ಜಗತ್ತಿಗೆ ಚೈತನ್ಯವನ್ನು ತುಂಬುವ ಶಕ್ತಿಯಿದೆ. ನೀರು ಎಲ್ಲ ಜೀವಿಗಳಿಗೆ ಅಗತ್ಯವಾದ ವಸ್ತು ಭೂಮಿಯ ಮೇಲ್ಮೈಯಲ್ಲಿ ಶೇ 70 ಭಾಗದಷ್ಟು ನೀರು ಕಂಡುಬರುತ್ತದೆ. ಕುಡಿಯಲು ಕೇವಲ ಶೇ 3 ರಷ್ಟು ಮಾತ್ರ ಶುದ್ಧ ನೀರು ಸಿಗುತ್ತದೆ. ನೀರಿನ ಶೇ 97 ಭಾಗ ಸಮುದ್ರದ ನೀರು ಅದು ಲವಣಾಂಶ ಪೂರಿತವಾಗಿದ್ದು ಕುಡಿಯಲು ಯೋಗ್ಯವಲ್ಲದ್ದು. ನಮ್ಮ ಪೂರ್ವಿಕರು ಇಂದಿಗೂ ಭೂಮಿತಾಯಿ ಗಂಗಾಮಾತೆಯನ್ನು ನೆನೆಯದೆ ಯಾವುದೇ ಕಾರ್ಯವನ್ನು ಮಾಡಲಾರರು. ಅವರ ಭಾವನೆಯಂತೆ “ವರುಣಪ್ಪ ಸುರಿಸುತ್ತಾನೆ. ಭೂಮಿತಾಯಿ ಬೆಳೆತಾಳೆ” ಅನ್ನೋದು ನಮಗೂ ಅದೇ ಭಾವನೆ ಆಕಾಶದ ಮೇಲೆ ವರುಣದೇವನಿದ್ದಾನೆ ಮಳೆ ಸುರಿಸುತಿದ್ದಾನೆ ಎಂದು ನಮ್ಮ ಹಿರಿಯರನ್ನು ಮಳೆ ಹೇಗೆ ಬರುತ್ತದೆ ಎಂದು ಕೇಳಿದರೆ ತಮ್ಮದೇ ವೈಜ್ಞಾನಿಕ

ತಿಳುವಳಿಕೆಯಲ್ಲಿ ಜಲಚಕ್ರದ ಕಸಿಯೊಂದಿಗೆ ಹಾಡನ್ನು ಕಟ್ಟಿ ಹೀಗೆ ಹೇಳುತಿದ್ದರು.

" ಸಾಗರದ ನೀರು ಕಾಡು ಆವಿಯಾಗಿ ಮೇಲೆ ತಂಪಾಗಿ
ಚಲಿಸುವುದು

ಮೋಡವಾಗಿ ಭಾರವಾಗಿ ಬೀಳುವುದು ಮಳೆಯಾಗಿ

ಮತ್ತೆ ಸಾಗರವ ಸೇರುವುದು ನದಿಯಾಗಿ" ಎಂದು
ಹೇಳುತ್ತಿದ್ದರು. ನಮ್ಮ ಜಾನಪದರು ಕೆರೆ–ಕಟ್ಟೆ ಸೊಬಗನ್ನ ಪದಗಳಲ್ಲಿ ಕಟ್ಟಿ

" ಮೂಡಲ್ ಕುಣಿಗಲ್ ಕೆರೆ

ನೋಡೋರ್ಗೊಂದೈಬೋಗ

ಮೂಡಿಬರ್ತಾನೆ ಚಂದಿರಾಮ". ಎಂದು ಹೇಳುತ್ತಿದ್ದರು.

ನೀರಿಗಾಗಿ ಪ್ರಾಣ ತ್ಯಾಗವನ್ನು ಮಾಡಿದ ಕೆರೆಗೆ ಹಾರ ಕಥೆ ನಮ್ಮ ಕಣ್ಣ ಮುಂದೆಯೇ ಕಟ್ಟಿದಂತಿದೆ. ಅಲ್ಲದೆ ನಮ್ಮ ಪೂರ್ವಿಕರು ಹೇಳುವಂತೆ, ಪುರಾಣದಲ್ಲಿ ಭಗೀರಥ ಋಷಿಮುನಿ ತಪಗೈದು ಗಂಗೆಯನ್ನ ಧರೆಗೆ ಕರೆಸಿದರು ಎಂದು ದೈವರೂಪಿಯಾಗಿ ಧರೆಗಿಳಿದ ಗಂಗೆ ಇಂದು ಜೀವ ರಾಶಿಗೆ ಜೀವಾಮೃತ ಬಿಂದುವಾಗಿದ್ದಾಳೆ. ಅನಾದಿಕಾಲದಲ್ಲಿ ಕಾಡುಪ್ರಾಣಿಗಳಂತೆ ವಾಸಿಸುತ್ತಿದ್ದ ಮಾನವ ನಾಗರಿಕತೆಯನ್ನ ಕಂಡುಕೊಂಡದ್ದೆ, ನದಿಮುಖಜ ಭೂಮಿಯಲ್ಲಿ ಎಂಬುದು ತಿಳಿದ ವಿಷಯವಾಗಿದೆ. ವೈಜ್ಞಾನಿಕವಾಗಿ ಪ್ರಾರಂಭವಾದ ನಾಗರೀಕತೆ ಇಂದು ಅವೈಜ್ಞಾನಿಕತೆಯೆಡೆಗೆ ಮುಖಮಾಡಿ ನಿಂತಿದೆ. ನಾಗರಿಕತೆಯ ಉಗಮಕ್ಕೆ ಕಾರಣವಾದ ಮುಗಿಯಲಾರದ ನೈಸರ್ಗಿಕ ಸಂಪತ್ತು ನೀರು, ಗಾಳಿ ಇಂದು

ಅವೈಜ್ಞಾನಿಕ ಮತ್ತು  ಅನಾಗರಿಕತೆಯ ಧೋರಣೆಯೊಂದಿಗೆ ಹೇರಳವಾದ ನಿಸರ್ಗ ಸಂಪತ್ತು ಇಂದು ವಿರಳವಾಗುತ್ತಿದೆ. ಕುಡಿಯಲು ಶುದ್ದವಾದ ನೀರು, ಸೇವಿಸಲು ಶುದ್ದವಾದ ಗಾಳಿ ಎಷ್ಟು ಸಿಗುತ್ತದೆ ಎಂದು ಯೋಚಿಸಿದರೆ ಎಲ್ಲರ ಅರಿವಿಗೆ ಬರುತ್ತದೆ. ಎಲ್ಲವನ್ನು ಕೊಟ್ಟ ಪರಿಸರಕ್ಕೆ ನಾವೇನು ಕೊಟ್ಟೇವು ಎಂಬುದು, ಬಡವರ ಊಟಿ ಎಂಬ ಖ್ಯಾತಿ ಪಡೆದ ಹಾಸನ ಜಿಲ್ಲೆ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಹಸಿರ ಹೊದ್ದು ನಿಂತ ಮಲೆನಾಡ ಪ್ರದೇಶ ಇಂತಹ ಪ್ರದೇಶದಲ್ಲಿಯೂ ಕುಡಿಯುವ ನೀರಿಗೆ ಅಭಾವ ಎಂದರೆ ನಂಬಲು ಅಸಾಧ್ಯವಾದ ಮಾತು. ಒಂದಾನೊಂದು ಕಾಲದಲ್ಲಿ ಸಮೃದ್ಧಿಯಾಗಿ ತುಂಬಿಹರಿಯುತ್ತಿದ್ದ ಕೆರೆ–ಕಟ್ಟೆ, ನದಿ–ಕಾಲುವೆಗಳು ಇಂದು ಬರಿದಾಗಿವೆ. ಮಳೆ ಆಶ್ರಯದಿಂದಲೇ ಬೇಸಾಯದ ಪದ್ಧತಿ ನಡೆಸುವಂತಿದೆ. 3 ಸಾವಿರ ಅಡಿ ಕೊರೆದರೂ ಸಿಗದೆ ಇರುವ ಜಲದ ಸೆಲೆ ಎಲ್ಲೋ ಒಂದು ಕಡೆ ಆತಂಕ ಸೃಷ್ಟಿಸಿದೆ.  ಮುಂದೊಂದು ದಿನ ವ್ಯವಸಾಯಕ್ಕಿರಲಿ ಕುಡಿಯುವ ನೀರಿಗೂ ಆಹಾಕಾರವೆದ್ದರೂ ಆಶ್ಚರ್ಯವೆನಿಲ್ಲ. ಕಳೆದ 5 ವರ್ಷಗಳಿಂದಲೂ ಹಾಸನ ಜಿಲ್ಲೆ , ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕನ್ನು ಬರಪೀಡಿತ ಪ್ರದೇಶ ಎಂದು ಕೇಂದ್ರಸರ್ಕಾರದಿಂದಲೇ ಘೋಷಿಸಲ್ಪಟ್ಟಿದೆ. 150 ಅಡಿಗಿಂತ ಹೆಚ್ಚು ಆಳದಲ್ಲಿರುವ ನೀರು ಕುಡಿಯಲು ಯೋಗ್ಯವಲ್ಲದ ಭೂಮಿಯಿಂದ ಹೆಚ್ಚು ಹೆಚ್ಚು ಕೊರೆದಂತೆ ದೊರಕುವ ನೀರು ಫ್ಲೋರೈಡ್ ಹಾಗೂ ಲವಣದಿಂದ ಕೂಡಿದ್ದು, ಈ ನೀರನ್ನು ಸೇವಿಸಿದ ಜನರು ಅನಾರೋಗ್ಯ ಪೀಡಿತರಾಗುತ್ತಿರುವುದು ಮತ್ತೆ ಮಕ್ಕಳ ಹಲ್ಲುಗಳು ಹಳದಿಗಟ್ಟುತ್ತಿರುವುದು ಇದಕ್ಕೆ ಕಾರಣವಾಗಿದೆ. ಈ ಕಾಯಿಲೆಯನ್ನು ಅರಸೀಕೆರೆ ವಿವಿಧ ಭಾಗಗಳಲ್ಲಿ ಹೆಚ್ಚಾಗಿ ಕಾಣುತ್ತಿದ್ದೇವೆ. ಇನ್ನು ಹೀಗೆ ಮುಂದುವರೆದರೆ ಕುಡಿಯುವ ನೀರಿನ ಅಭಾವವೇಳುವುದರಲ್ಲಿ ಯಾವುದೇ ಸಂಶಯವಿಲ್ಲ.

2017–18ನೇ ಸಾಲಿನಲ್ಲಿ ಹಾಸನದ ವಿವಿದ ಬಡಾವಣೆಗಳಲ್ಲಿ ಕುಡಿಯಲು ನೀರಿಲ್ಲದೆ ಪರದಾಡುತ್ತಿದ್ದಂತಹ ಸಂದರ್ಭದಲ್ಲಿ ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನ ಒದಗಿಸುವಂತಹ ಪರಿಸ್ಥಿತಿ ಎದುರಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಹಾಸನದ ಮೇಲೆ ಪ್ರಭಾವ ಬೀರಿದ ಸಂಸ್ಥೆಯೊಂದರ ಯಶೋಗಾಥೆ ನಮ್ಮ ಮುಂದಿದೆ. ಮಹಾರಾಷ್ಟ್ರದಲ್ಲಿ ಅಮೀರ್ ಖಾನ್‌ರವರ ಪಾನಿಪೌಂಡೇಷನ್ ಮೂಲಕ ಸಾಮಾಜಿಕ ಕೆಲಸವನ್ನು  ಮಾಡುತ್ತಿದರು. ಪುರಾತನದ ಪ್ರಸಿದ್ದ, ಕೆರೆಕಟ್ಟೆ, ಕಲ್ಯಾಣಿಗಳ ಹೊಳೆತ್ತಿ ಜಲದ ಜಲಸಂಪನ್ಮೂಲವನ್ನು ಸಂರಕ್ಷಣೆಯನ್ನು ಮಾಡುವ ಜಾಗೃತಿಯನ್ನು ಮೂಡಿಸುವಂತಹ “ದಿ ಬ್ಯಾಟಲ್ ಎಗೆನೆಸ್ಟ್ ಡ್ರಾಟ್” ಎಂಬ ಸಾಕ್ಷ್ಯಚಿತ್ರವನ್ನು  ಸಮಾನಮನಸ್ಕರಾದ ಪರಿಸರ ಮಿತ್ರರು ವೀಕ್ಷಿಸಿದಾಗ ಹಾಸನದಲ್ಲಿದ್ದ ಪರಿಸರ ಪ್ರೇಮಿಗಳಾದ ಆರ್. ಪಿ ವೆಂಕಟೇಶಮೂರ್ತಿರವರು ಹಾಗೂ ಡಾ॥ ಎಚ್, ಎಲ್ ನಾಗರಾಜುರವರ ಮನದಲ್ಲಿ ಹೊಸ ಆಲೋಚನೆಯೊಂದು ಮೂಡಿ ಇವರ ನೇತೃತ್ವದಲ್ಲಿ ಸಭೆಸೇರಿ ಜಲದ ಸಂರಕ್ಷಣೆಗೆ ಮುಂದಾಗಲು “ ಹಸಿರು ಭೂಮಿ ಪ್ರತಿಷ್ಠಾನ” ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಈ ಸಂಸ್ಥೆಯಲ್ಲಿ ನಾನು ಒಬ್ಬ ಟ್ರಸ್ಟಿಯಾಗಿ  ಕಳೆದ 4 ವರ್ಷಗಳಿಂದ ನಿರಂತರವಾಗಿ ಜಲ ಸಂರಕ್ಷಣಾ ಪೂರಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಬಂದೆನು. ಜಿಲ್ಲೆಯಲ್ಲಿನ ಪ್ರಸಿದ್ಧ ಕೊಳಗಳು, ಕೆರೆಕಟ್ಟೆ ಬಾವಿಗಳ ಹೊಳೆತ್ತುವ ಮತ್ತು ಕಲ್ಯಾಣಿಗಳ ಪುನಶ್ಚೇತನಗೊಳಿಸುವ ಗಿಡ ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು.  ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅಂತರ್ಜಲದ ಮಹತ್ವದ ಜಾಗೃತಿಯೊಂದಿಗೆ ಜಲಾಂದೋಲನಕ್ಕೆ ಮುನ್ನುಡಿ ಬರೆಯಲಾಯಿತು. ಆ ಸಂದರ್ಭದಲ್ಲಿ ದೊಡ್ಡಕೊಂಡಗೊಳದ ಆರಿಸಿನ ಬಾವಿ

ಹಾಗೂ ಇನ್ನೊಂದು ಕಲ್ಯಾಣಿ  ಎರಡು ದೊಡ್ಡ ಕಲ್ಯಾಣಿಗಳ ಹೂಳೆತ್ತುವ ಕಾರ್ಯಕ್ಕೆ ನನ್ನಾದಿಯಾಗಿ ಚನ್ನರಾಯಪಟ್ಟಣದಿಂದ ಮೂವತ್ತು ಜನ ಈ ಕಾರ್ಯದಲ್ಲಿ ಭಾಗಿಯಾದೇವು.  ಕೆರೆಯ ಜಲದ ಮೂಲ ಎಲ್ಲಿದೆ ಎಂದು ಪತ್ತೆ ಹಚ್ಚಲು ಹೊಳೆತ್ತುವ ಕಾರ್ಯದಲ್ಲಿ ಮುಂದಾದೇವು ಬಂದಿದ್ದ ಜಲತಜ್ಞರು ಪತ್ತೆಹಚ್ಚುವಲ್ಲಿ ವಿಫಲರಾದರು. ಹೊಳೆತ್ತಿದ್ದರೂ ಜಲದ ಕಣ್ಣು ಕಾಣದೆ ಕಂಗಾಲಾದ ನಮಗೆ ಏನು ತೋಚದೆ, ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂದಿರುಗುವ ಮನಸ್ಸು ಮಾಡಿದರು ಕೊನೆಗೆ ಆಸ್ಥಳದಲ್ಲಿ ಆರ್. ಪಿ ವೆಂಕಟೇಶ್ ಮೂರ್ತಿ, ಡಾ॥ ಎಚ್. ಎಲ್ ನಾಗರಾಜು ಮತ್ತು ನಾನು ಮತ್ತು ಇನ್ನಿತರ ಸ್ನೇಹಿತರು ಉಳಿದೆವು.  ಎಲ್ಲೋ ಒಂದು ಕಡೆ ನನ್ನ ಒಳಮನಸ್ಸು ಒಂದು ಗುಂಡಿಯ ಕಡೆ ಜಲದ ಕಣ್ಣು ಇರುವ ಸೂಚನೆಯನ್ನು ನೀಡುತ್ತಿತ್ತು. ಹಿಂದಿರುಗಲು ಮನಸಾಗದೆ ಡಾ॥ ನಾಗರಾಜ್‌ರವರಿಗೆ  "ಸರ್ ಇನ್ನು ಸ್ವಲ್ಪ ಅಗೆದು  ನೋಡೋಣ ಜಲ ಸಿಗಬಹುದು". ಎಂದು ನಾನೇ ಗುದ್ದಲಿ ತೆಗೆದುಕೊಂಡು ಅಗೆಯತೊಡಗಿದೆ 4 ರಿಂದ 5 ಅಡಿ ಅಗೆದಂತೆ ಜಲದ ತೇವಾಂಶ ದೊರೆಯಿತು. ಆಗ ಉತ್ಸಾಹಕರಾಗಿ ಮೂವರು ಸೇರಿ ಅಗೆದಂತೆ ಅಗೆದಂತೆ ಜಲದ ಕಣ್ಣು ತೆರೆದುಕೊಂಡಿತು. ಅಂದು ಆದ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಈ ಒಂದು ಕಾರ್ಯ ಹಸಿರು ಭೂಮಿ ಪ್ರತಿಷ್ಠಾನದ ಯಶೋಗಾಥೆಗೆ ಮುನ್ನುಡಿ ಬರೆಯಿತು. ನಂತರ ಹಲವಾರು ಕೆರೆಕಟ್ಟೆ ಬಾವಿ, ಕಲ್ಯಾಣಿಗಳ ಹೊಳೆತ್ತುವ ಕಾರ್ಯಕ್ರಮ ಮುಂದುವರೆದು, ಬತ್ತಿದ ಜಲರಾಶಿ ಮತ್ತೆ ತುಂಬುವಂತೆ ಆಯಿತು. ಹಸಿರು ಭೂಮಿ ಪ್ರತಿಷ್ಠಾನದ ಅಮೋಘ ಕಾರ್ಯವನ್ನು ಕಂಡ ನಾವುಗಳು ಕೂಡ ಚನ್ನರಾಯಪಟ್ಟಣದಲ್ಲಿ ಹಸಿರು ಭೂಮಿ ಪ್ರತಿಷ್ಟಾನ, ಭೂಮಿ ಉಳಿಸಿ ಆಂದೋಲನ, ಮಕ್ಕಳ ಸಾಹಿತ್ಯ ಪರಿಷತ್ತಿನ    ಸಂಘಗಳೊಂದಿಗೆ

ಚನ್ನರಾಯಪಟ್ಟಣದ ಸುತ್ತಮುತ್ತ ನಾಗರನವಿಲೆ, ಯಾಚೇನಹಳ್ಳಿ, ಸುಬ್ಬು ಸರ್ ರವರ ಊರು, ಬಿದಿರೆ, ಪ್ರಭುರವರ ಊರು, ಹಡೆನಹಳ್ಳಿ ಶ್ರವಣಬೆಳಗೊಳ ಮುಂತಾದ ಕಡೆ ಹೊಳೆತ್ತುವ ಕಾರ್ಯ ನಡೆದು ಈಗ ಅವೆಲ್ಲವೂ ತುಂಬಿರುವುದು ಹಸಿರುಭೂಮಿ ಪ್ರತಿಷ್ಟಾನದ ಸಾರ್ಥಕತೆಯನ್ನು ಬಿಂಬಿಸುತ್ತಿವೆ. ಒಂದು ಮಹಾನ್ ಕಾರ್ಯ ಒಬ್ಬರೂ ಇಬ್ಬರಿಂದ ಸಾಧ್ಯವಿಲ್ಲ ಎಲ್ಲ ಜನರ ಮನೆಮನಗಳಲ್ಲೂ ಕೈಜೋಡಿಸುವ ಮೂಲಕ ಆಗಬೇಕು. ನೀರಿನಿಂದ ಎಷ್ಟೇಲ್ಲಾ ಪ್ರಯೋಜನವನ್ನು ಪಡೆಯುತ್ತಿರುವ ಮನುಷ್ಯ ನೀರಿನ ಅಧಾರವಾದ ಪರಿಸರವನ್ನು ಮರಗಿಡಗಳನ್ನು ನಾಶ ಮಾಡುವ ಮೂಲಕ ತನ್ನ ಅವಸಾನದ ಹಾದಿಯನ್ನು ತಾನೇ ಕಂಡು ಕೊಳ್ಳುತ್ತಿದ್ದಾನೆ. ಇದು ಹೀಗೆ ಮುಂದುವರೆದರೆ ಮುಂದೊಂದು ದಿನ ನೀರಿಗೆ ಆಹಾಕಾರವೆದ್ದು ಬೊಬ್ಬಿಡುವ ಪರಿಸ್ಥಿತಿ ದೂರದಲ್ಲಿಲ್ಲ ಎನಿಸುತ್ತದೆ. ನೈಲ್, ಕಾಂಗೋ, ನೈಗರ್ ನಂತಹ ದೊಡ್ಡ ನದಿಗಳು ಹರಿಯುವ ಅಫ್ರಿಕಾದೇಶದಲ್ಲಿ ಕುಡಿಯುವ ನೀರಿನ ಅಭಾವ ತಲೆದೊರಿದ್ದರಿಂದ ಎರಡು ಮಹಾನಗರ ಪಾಲಿಕೆಗಳನ್ನು ಮುಚ್ಚಿದ ಸಂಗತಿ ನಮ್ಮ ಕಣ್ಣಮುಂದಿದೆ. ನಂತರದ ಇದರ ಸಾಲಿನಲ್ಲಿ ನಮ್ಮ ದೇಶ ನಿಂತರೆ ಯಾವುದೇ ಸಂಶಯವಿಲ್ಲ. ಕೋಟ್ಯಾಂತರ ಜನಸಂಖ್ಯೆ ಬಳಸುತ್ತಿರುವ ಪ್ಲಾಸ್ಟಿಕ್ ಇಂದು ಸಾಗರವನ್ನು ಸೇರಿ ಪ್ಲಾಸ್ಟಿಕ್ ಸಾಗರವೇ ನಿರ್ಮಾಣವಾಗಿರುವುದ್ದನ್ನು ನಾವೀಗಾಗಲೇ ಕಂಡಿದ್ದೇವೆ. ನೀರನ್ನು ಭೂಮಿಗೆ ಇಂಗಲು ಬಿಡದೆ ಅಂತರ್ಜಲದ ಮಟ್ಟವನ್ನು ಕಡಿಮೆ ಮಾಡುವಲ್ಲಿ ಇದು ಪ್ರಮುಖ ಪಾತ್ರವಹಿಸಿದೆ. ಹೀಗೆ ಮುಂದುವರೆದರೆ ಜೀವ ಸಂಕುಲದ ಪರಿಸ್ಥಿತಿ ಎಂತಹ ಜಲಕ್ಷಾಮವನ್ನು ಎದುರಿಸಬಹುದು ಊಹಿಸಿ. ಮುಂದೆ ಏನಾದರೂ ವಿಶ್ವ ಯುದ್ಧ ಜರುಗುವುದೇ ಆದರೆ ಅದು ಜಲಕ್ಕಾಗಿ ಎಂದು ಹೇಳಬಹುದು. ಕೆರೆ–ಕಟ್ಟೆ, ಬಾವಿ ಅಂತರ್ಜಲ ಸಾಗರ ನದಿಗಳ

ಮೂಲ ಮಳೆ. ಮಳೆಯ ಮೂಲ ಮರ, ಮರದಿಂದ ಮಳೆ ಮಳೆಯಿಂದ ಮರ ಒಂದಕ್ಕೊಂದು ಪೂರಕ. ಇಂದು ಪರಿಸರ ಸಂರಕ್ಷಣ ಕಾರ್ಯದಲ್ಲಿ ಸಾಕಷ್ಟು ಭಾಷಣ ಮಾಡಬಹುದು, ಆದರೆ ಅದು ಜನರ ಮನಸ್ಸಿನಲ್ಲಿ ಬೇರೂರದಿದ್ದರೆ ವ್ಯರ್ಥ.  ಇಂದು ನೀರು, ಗಾಳಿ, ಬೆಳಕು ಯಾವುದೋ ಒಂದು ಜೀವಿಗೆ ಸಂಬಂಧಿಸಿಲ್ಲ, ಇಡೀ ಜೀವ ಸಂಕುಲಕ್ಕೆ ಅವಶ್ಯಕ. ಪರಿಸರದ ಒಂದು ಭಾಗ ಮನುಷ್ಯನೆ ಹೊರತು, ಮನುಷ್ಯನ ಒಂದು ಭಾಗ ಪರಿಸರವಲ್ಲ. ಇಂದು ನಾವು ಎದುರಿಸುತ್ತಿರುವ ಪ್ರಕೃತಿ ವಿಕೋಪಕ್ಕೆ ಕಾರಣಕರ್ತರು ನಾವೇ. ನಾವೇನು ಪರಿಸರಕ್ಕೆ ಕೊಟ್ಟೆವೋ ಅದರ ಪ್ರತಿಕಾರವಾಗಿ ಪರಿಸರ ತಕ್ಕ ಪಾಠ ಕಲಿಸುತ್ತಿದೆ. ಈಗ ಬಂದು ಹೋಗುತ್ತಿರುವ ಪ್ರತಿಯೊಂದು ಅವಘಡಗಳು ಮನುಕುಲದ ವಿನಾಶದ ಸಂಕೇತಗಳಾಗಿವೆ. ಇನ್ನಾದರೂ ಎಚ್ಚೆತ್ತು ಪರಿಸರ ಸಂರಕ್ಷಣಾ ಕಾರ್ಯದಲ್ಲಿ ತೊಡಗದಿದ್ದರೆ, ದೈವದತ್ತವಾಗಿ ದೊರಕಿದ ನೆಲ–ಜಲ ನಾಶವಾಗಿ ಸಂಕಷ್ಟದ ದಿನಗಳು ಎದುರಾಗುತ್ತವೆ.

200 ಮಿ. ಮೀಟರ್ ಗಳಿಗೂ ಕಡಿಮೆ ಮಳೆ ಬೀಳುವ ಅತ್ಯಂತ ಕಿರು ರಾಷ್ಟ್ರವಾದ ಇಸ್ರೇಲ್ ಉತ್ತಮ ಬೆಳೆ ಬೆಳೆದು ಬೃಹತ್ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ ಎಂದರೆ ಅದಕ್ಕೆ ಕಾರಣ ಬಿದ್ದ ಮಳೆಯ ನೀರು ವ್ಯರ್ಥವಾಗಿ ಹರಿಯದಂತೆ ಬಿಡದೆ ತಡೆದು  ನೆಲದೊಳಗೆ ನೀರನ್ನು ಇಂಗಿಸುವ ವೈಜ್ಞಾನಿಕ ಕ್ರಮದಲ್ಲಿ ಅಂತರ್ಜಲದ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಿದೆ. ಅಂತರ್ಜಲವನ್ನು ಪೋಲು ಮಾಡದಂತೆ ತುಂತುರು ನೀರಾವರಿ ಮತ್ತು ಹನಿ ನೀರಾವರಿ ಮೂಲಕ ವ್ಯವಸಾಯಕ್ಕೆ ಬಳಸಿಕೊಂಡು ನೀರನ್ನು ದ್ರವರೂಪದ ಚಿನ್ನವಾಗಿ ಸಂರಕ್ಷಿಸಲಾಗುತ್ತಿದೆ. ಇಂತಹ ಮಾದರಿಗಳು ನಮ್ಮ ದೇಶಕ್ಕೆ ಅನುಕರಣೆಯಾಗಬೇಕು. ಮತ್ತು ನೀರಿನ ಅಪಮೌಲ್ಯ ವಾಗದಂತೆ

ತಡೆಯಬೇಕು ಇಲ್ಲವಾದರೆ ರಾಷ್ಟ್ರಕವಿ ಜಿ. ಎಸ್ ಶಿವರುದ್ರಪ್ಪರವರು ಹೇಳುವಂತೆ

“ ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ,

ನಾಲ್ಕು ಹನಿಯ ಚೆಲ್ಲಿ

ದಿನದಿನವೂ ಕಾದು ಬಾಯಾರಿ ಬೆಂದು

ಬೆಂಗದಿರ ತಾಪದಲಿ ”. ಎಂದು ಬಾನೆತ್ತರಕ್ಕೆ ಮುಖಮಾಡಿ ಹನಿನೀರಿಗಾಗಿ ಪರಿತಪಿಸಬೇಕಾಗುತ್ತದೆ. ಜಲದ ಕಣ್ಣನ್ನು ಸಂರಕ್ಷಣೆ ಮಾಡುತ್ತಾ ಮುಂದಿನ ತಲೆಮಾರಿಗೆ ನೀರನ್ನು ಸಂರಕ್ಷಿಸೋಣ ಹಿರಿಯರು ಕೊಟ್ಟ ಕೊಡುಗೆಯನ್ನು ಮುಂದಿನ ತಲೆಮಾರಿಗೆ ಹಾಗೆ ಉಳಿಸೋಣ. ಜಲ ಸಕಲ ಜೀವರಾಶಿಗೆ ಜೀವದ ಮೂಲ.

## :ಇವರ ಅನುಪಮ ಸೇವೆಗೆ ಅರಸಿ ಬಂದ ಪ್ರಶಸ್ತಿಗಳು:

❖ 2004–05ರಲ್ಲಿ ಕರ್ನಾಟಕ ಸರ್ಕಾರದಅರಣ್ಯ ಇಲಾಖೆ ನೀಡುವ"ರಾಜೀವ್‌ಗಾಂಧಿ ಪರಿಸರ ಪ್ರಶಸ್ತಿ"ಹಾಗೂ 1 ಲಕ್ಷ ನಗದು ಹಣ.

❖ 2005ರಲ್ಲಿ ಭಾರತ ಸರ್ಕಾರ ನೀಡುವಂತಹ"ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪ್ರಶಸ್ತಿ"ಈ ಪ್ರಶಸ್ತಿಗೆ ಸಾಲುಮರದತಿಮ್ಮಕ್ಕರ ನಂತರ ಭಾಜನರಾಗಿರುವವರು ಶ್ರೀ ಸಿ. ಎನ್‌ಅಶೋಕ್‌ರವರು ಮಾತ್ರರಾಗಿರುತ್ತಾರೆ ಹಾಗೂ 1 ಲಕ್ಷ ನಗದು ಹಣ.

❖ 2005ರಲ್ಲಿಜಿಲ್ಲಾತೋಟಗಾರಿಕಾ ಇಲಾಖೆ ನೀಡುವ

" ಜಿಲ್ಲಾಉತ್ತಮತೋಟಗಾರಿಕಾ ಪ್ರಶಸ್ತಿ".

❖ 2008–09ರಲ್ಲಿ ರಾಘವೇಂದ್ರ ಮಠ ಮಂತ್ರಾಲಯ ನೀಡುವ"ವಿಜಯ ವಿಠಲ ಪ್ರಶಸ್ತಿ" ಹಾಗೂ 10 ಸಾವಿರ ನಗದು ಹಣ.

❖ 2010ರಲ್ಲಿ ಕರ್ನಾಟಕ ಸರ್ಕಾರ ನೀಡುವ"ವೃಕ್ಷ ಪ್ರೇಮಿ ಪ್ರಶಸ್ತಿ" .

❖ ಹಲವಾರು ಸಂಘ ಸಂಸ್ಥೆಗಳಿಂದ ನೂರಾರು ಪ್ರಶಸ್ತಿಗಳು ಲಭಿಸಿದೆ.

❖ 2014–15ನೇ ಸಾಲಿನಿನಲ್ಲಿ ಶ್ರೀಆದಿಚುಂಚನಗಿರಿಮಹಾಸಂಸ್ಥಾನ ಮಠ ನೀಡುವ“ಚುಂಚಶ್ರೀ ಪ್ರಶಸ್ತಿ”50ಸಾವಿರ ನಗದು ಹಣ





